ಶ್ರೀ ಎಚ್. ಎಸ್. ಸಿದ್ದಪ್ಪ.—54 ಫಾರ್ಮಿಂಗ್ ಸೊಸೈಟಿಗಳಲ್ಲಿ ಯಾವ್ಯಾವ ವೆರೈಟೀಸ್ ಸೊಸೈಟಿಗಳಿವೆ ?

ಶ್ರೀ ಎ. ಶಂಕರ ಆಳ್ವ —ವೆರೈಟೀಸ್ ಬಹಳ ಇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ರ್ಯಾಂಡ್ ರಿಫಾರಮ್ಸ್‌ನಲ್ಲಿ ಏನಾದರೂ ಈ ಕೋಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳು ಸೇರಿವೆಯೇ ?

ಶ್ರೀ ಎ. ಶಂಕರ ಆಳ್ವ.—ಅದು ಬಂದ ಸಂಕರ ಅದನ್ನು ನೋಡುತ್ತೇವೆ.

ಶ್ರೀ ಅಂದಾನಯ್ಯ—ನಾಲ್ಕು ಸಾವಿರ, ಐದು ಸಾವಿರ ರೂಪಾಯಿಗಳನ್ನು ಸಾಲವಾಗಿ ಕೆಲವು ಸೊಸೈಟಿಗಳಿಗೆ ಕೊಟ್ಟಿದ್ದೀರಿ. ಆ ಸಾಲಗಳನ್ನು ರಿಕವರಿ ಮಾಡುವುದಕ್ಕೆ ಏನಾದರೂ ಸೂಚನೆಗಳನ್ನು ಕೊಟ್ಟಿದ್ದೀರಾ ?

ಶ್ರೀ ಎ. ಶಂಕರ ಆಳ್ವ.—ನಾನು ಅದನ್ನು ತನಿಖೆ ಮಾಡುತ್ತೇನೆ. ವರ್ಕ್ ಆಗದೆ ಇರುವ ಸೊಸೈಟಿಗಳಿಂದ ಹಣ ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೋ ಇಲ್ಲವೋ ಎಂಬುದನ್ನು ನೋಡುತ್ತೇನೆ.

Interest Charged on Loans Advanced to Co-operatives and others

255. Sri ANDANAIAH (Kunigal).—

Will the Minister for Co-operation be pleased to state .—

(*a*) the percentage of interest charged by the Government for the loans advanced by the Government through Co-operative Societies. Primary Land Development Banks and on Land improvements Loans;

(*b*) the percentage of penal interest charged by the above agencies, if the parties fail to repay the instalments in time;

(*c*) whether the Government has received any representations from the persons who have taken loan from the Government agencies that the penal interest charged is very high ?

Sri A. SHANKARA ALVA (Minister for Co-operation).—

(*a*) (i) Interest is charged by the Government for the loan advanced to the Mysore State Co-operative Housing Corporation Ltd., Bangalore, at 6¾ per cent. The Corporation, in turn, charges to the Primary Societies at 7½ per cent and these Societies, in turn, charge to the members 8¼ per cent.

(ii) The percentage of interest charged by the Government for the loans advanced to the Mysore State SC and ST Housing Corporation Ltd., Bangalore, is 3 per cent and same rate of interest is charged to the members.

(iii) The percentage of interest charged on the Government loans advanced to the Milk Supply Societies for the purchase of Milch Animals is 5 per cent.

(SRI A. SHANKARA ALVA)

(iv) No loans have been sanctioned by Government for land Improvement through co-operative societies and Land Development Banks.

(v) Interest at 8½ per cent is charged on loans for land Improvement granted under the Land Improvement Loan Rules.

(*b*) (i) The percentage of penal interest charged by the Mysore State Co-operative Housing Corporation Ltd., Bangalore to the members is 10¾ per cent.

(ii) The percentage of penal interest charged by the Mysore State SC and ST Housing Corporation Ltd., Bangalore, is 7 per cent to the members.

(iii) The percentage of penal interest charged by Milk Supply Societies to the members is 9 per cent.

(iv) The percentage of penal interest charged on loans sanctioned for land improvement granted under the Land Improvement Loan Rules by the Revenue Department is 10 per cent.

(*c*) No.

ಶ್ರೀ ಆಂದಾನಯ್ಯ. —(ಅ)ಗೆ ಉತ್ತರವಾಗಿ ಭೂ ಅಭಿವೃದ್ಧಿಗಾಗಿ ಮಂಜೂರು ಮಾಡಲಾದ ಸಾಲಗಳಿಗೆ ಸೇಕಡಾ ಪತ್ಕೂ ಮುಕ್ಕಾಲುರಷ್ಟು ಸುಸ್ತಿ ಬಡ್ಡಿಯನ್ನು ವಿಧಿಸುವರೆಂದು ಹೇಳುತ್ತಾರೆ ಬಹುತೇಕ ಮಂದಿ ಬಡ ರೈತರು ಇರುವುದರಿಂದ ಇವನ್ನು ಮಹಾ ಮಾಡುವುದಕ್ಕೆ ಸರ್ಕಾರದವರು ಮನಸ್ಸು ಮಾಡುತ್ತಾರೆಯೇ ?

†ಶ್ರೀ ಎ. ಶಂಕರ ಆಳ್ವ.—ರೂರ್ಸ್ ಪ್ರಕಾರ ಅನೆಕ್ಸ್ ಬ್ಯಾಂಕಿಗೆ ರಿಸರ್ವ್ ಬ್ಯಾಂಕಿನವರು ಏನು ಚಾರ್ಜ್ ಮಾಡುತ್ತಾರೋ ಅದನ್ನು ಇವರ ಮೇಲೆ ಚಾರ್ಜ್ ಮಾಡುತ್ತಾರೆ.

ಶ್ರೀ ಆಂದಾನಯ್ಯ.—ಕೆಲವು ಸೊಸೈಟಿಗಳಿಗೆ ತನ್ನ ಸಹಕಾರ ಇಲಾಖೆಯಿಂದ ವಂಚಿತಿಯನ್ನು ಕೊಟ್ಟಿಲ್ಲ. ಕೆಲವರು ಪೀನರ್ ಇಂಟರೆಸ್ಟನ್ನು ಸೇಕಡ 2 ಅಥವಾ 3 ರಷ್ಟು ಹಾಕುತ್ತಿದ್ದಾರೆ. ಮತ್ತೆ ಕೆಲವರು ಸೇಕಡ ಹತ್ತೂಮುಕ್ಕಾಲುರಷ್ಟು ಚಾರ್ಜ್ ಮಾಡುತ್ತಿದ್ದಾರೆ. ಇದಕ್ಕೆ ಕಾರಣವೇನು ?

ಶ್ರೀ ಎ. ಶಂಕರ ಆಳ್ವ.—ಬೇರೆ ಇನ್‌ಸ್ಟಿಟ್ಯೂಷನ್‌ಗಳು ಎಷ್ಟು ಹಣವನ್ನು ಬಡ್ಡಿಚ್ಚನಲ್ಲಿ ತೆಗೆದುಕೊಳ್ಳುತ್ತಾರೋ ಆವರ ಪ್ರಕಾರ ಅವರು ಇಂಟರೆಸ್ಟ್‌ನ್ನು ಚಾರ್ಜ್ ಮಾಡುತ್ತಾರೆ. ಅದು ಎರಡು ವರ್ಷಗಳ ತನಕ ಇರುತ್ತದೆ. ಆದರಿಂದಲೇ ಸ್ವಲ್ಪ ಹೆಚ್ಚು ಕಡಿಮೆ ಆಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.—ರಿಜರ್ವ್ ಬ್ಯಾಂಕ್ ಮತ್ತು ವರ್ಲ್ಡ್‌ಬ್ಯಾಂಕಿನಿಂದ ಸೇಕಡ ಒಂದೂವರೆಯಂತೆ ಇಂಟರೆಸ್ಟ್‌ಗೆ ಸಿಕ್ಕುವ ಹಣವನ್ನು ತಾವು ಸೇಕಡ ಆರು ಮುಕ್ಕಾಲರಂತೆ ಇಂಟರೆಸ್ಟ್ ವಸೂಲುಮಾಡುತ್ತೀರಿ. ರೈತರಿಗೆ ಈಗ ಸೇಕಡ ಒಂಬತ್ತುವರೆ ಅಥವಾ ಹತ್ತರಂತೆ ಸಿಗುತ್ತಿದೆ. ಈ ರೀತಿ ಕಡಿಮೆ ಬಡ್ಡಿಗೆ ಹಣ ಕೊಡದೆ ರೈತರಿಗೆ ಬಹಳ ಜಾಸ್ತಿಯಾಗಿ ಬಡ್ಡಿ ವಿಧಿಸುವ ಹಾಗೆ ಮಾಡುವುದು ಬಹಳ ಅನ್ಯಾಯವಲ್ಲವೇ ?

ಶ್ರೀ ಎ. ಶಂಕರ ಆಳ್ವ.—ರಿಜರ್ವ್ ಬ್ಯಾಂಕಿನವರು ಸೇಕಡ 4ರಷ್ಟು ಕೊಡುವುದರಿಂದ ಎಲ್ಲವನ್ನೂ ವಿತರಣೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅಪೆಕ್ಸ್ ಬ್ಯಾಂಕಿನಿಂದ ಡಿ.ಸಿ.ಸಿ. ಬ್ಯಾಂಕಿಗೆ ಹೋದಲು ಬರುತ್ತದೆ. ಆಮೇಲೆ ಪ್ರೈಮರಿ ಸೊಸೈಟಿಗಳಿಗೆ ಹೋಗುತ್ತದೆ. ಅಲ್ಲಿಯವರೆಗೂ ಬಡ್ಡಿ ಚಾರ್ಜ್, ಎಸ್ಟಾಬ್ಲಿಷ್‌ಮೆಂಟ್ ಎಲ್ಲವನ್ನೂ ಲೆಕ್ಕ ಮಾಡುತ್ತಾರೆ. ಅದು ನೇರವಾಗಿ ರಿಜರ್ವ್ ಬ್ಯಾಂಕಿನಿಂದ ರೈತರಿಗೆ ಸಿಗುವುದಿಲ್ಲ. ಆದರಿಂದ ಬಡ್ಡಿ ದರ ಜಾಸ್ತಿಯಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನಹಕಾರ ನಂಘಗಳ ಮೂಲಕ ಅನೇಕ ಸೊಸೈಟಿಗಳಲ್ಲಿ ಸಾಲಗಳನ್ನು ಪಡೆಯುವವರ ಪೈಕಿ ಪರಿಶಿಷ್ಟ ಜನಾಂಗದವರು ಹೆಚ್ಚು ಮಂದಿ ಭಾಗವಹಿಸಿದ್ದಾರೆ. ನಮಾಜವಾದ ನವಾಜ ರಚನೆ ಮಾಡತಕ್ಕವರಲ್ಲಿಯೂ ಅನೇಕ ಮಂದಿ ಪರಿಶಿಷ್ಟವರ್ಗದವರು ಇದ್ದಾರೆ. ಆ ನಂಸ್ಥೆಗಳಲ್ಲಿ ಪರಿಶಿಷ್ಟ ಜನಾಂಗದವರು ಹೆಚ್ಚಿಗೆ ಸಾಲ ಪಡೆಯುವುದಕ್ಕೆ ಇಂಟರೆಸ್ಟ್ ಫ್ರೀ ಲೋನ್ ಸ್ಕೀಮನ್ನು ಜಾರಿಗೆ ತರುತ್ತೀರಾ ?

ಶ್ರೀ ಎ. ಶಂಕರ ಆಳ್ವ —ಇಂಟರೆಸ್ಟ್ ಫ್ರೀ ಲೋನ್ ಸ್ಕೀಂ ಜಾರಿಗೆ ತರುವುದಕ್ಕೆ ಸಾಧ್ಯ ವಾಗುವುದಿಲ್ಲ. ಅದಷ್ಟು ಆ ಜನರು ಮುಂದೆ ಬರಬೇಕೆಂಬುದೇ ನನ್ನ ಇಷ್ಟ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕೋ ಆಪರೇಟಿವ್ ಇನ್‌ಸ್ಟಿಟ್ಯೂಷನ್ಸ್ ಹಾಗೂ ಅಪೆಕ್ಸ್ ಏನಿದೆಯೋ ಅವಕ್ಕೆ ಯಾವ್ಯಾವ ಬಡ್ಡಿ ದರದ ಮೇಲೆ ರಿಜರ್ವ್ ಬ್ಯಾಂಕ್‌ನವರು ಮತ್ತು ವರ್ಲ್ಡ್ ಬ್ಯಾಂಕಿನವರು ಸಾಲ ಕೊಡುತ್ತಾರೆ ?

ಶ್ರೀ ಎ. ಶಂಕರ ಆಳ್ವ. —ವರ್ಲ್ಡ್ ಬ್ಯಾಂಕಿನವರು ಸರ್ಕಾರಕ್ಕೆ ಶೇಕಡ ಅರ್ಧದಷ್ಟು, ಮುಕ್ಕಾಲು ಭಾಗದಷ್ಟು ಸರ್ವಿಸ್ ಚಾರ್ಜಸ್ ಎಂಬುದಾಗಿ ಕೊಡುತ್ತಾರೆ. ನಮ್ಮಲ್ಲಿಗೆ ಬಂದಾಗ್ಗೆ ಸಿಬ್ಬಂದಿಗೋಸ್ಕರ ಸ್ವಲ್ಪ ಖರ್ಚಾಗುತ್ತದೆ. ಅದರ ಮೇಲೆ ಲೆಕ್ಕಾಚಾರ ಮಾಡಿ ನಾವು ಕೊಡುತ್ತೇವೆ.

ಶ್ರೀ ಎಂ. ಎಸ್. ಸಿದ್ದಪ್ಪ.—ರಿಜರ್ವ್ ಬ್ಯಾಂಕಿನವರು ಹಣವನ್ನು ಒದಗಿಸುವಾಗ ಯಾವ್ಯಾವ ರೇಟ್ ಆಫ್ ಇಂಟರೆಸ್ಟ್ ಮೇಲೆ ಯಾವ್ಯಾವ ಬ್ಯಾಂಕಿಗೆ ಯಾವ್ಯಾವ ರೀತಿಯಲ್ಲಿ ಒದಗಿಸುತ್ತಾರೆ ?

ಶ್ರೀ ಎ. ಶಂಕರ ಆಳ್ವ.—ಉತ್ತರವಲ್ಲಿ ಹೇಳಿರುವ ಪ್ರಕಾರ ಸೇಕಡ 4ರಂತೆ ರಿಜರ್ವ್‌ಬ್ಯಾಂಕಿನವರು ಅಪೆಕ್ಸ್ ಬ್ಯಾಂಕಿಗೆ ಕೊಡುತ್ತಾರೆ. ಲ್ಯಾಂಡ್ ಡೆವಲಪ್‌ಮೆಂಟ್ ಬಗ್ಗೆ ಅವರು ಸಾಲ ಕೊಡುವುದಿಲ್ಲ. ಸರ್ಕಾರ ಗ್ಯಾರಂಟಿ ನಿಂತರೆ ಆಗ ಒಂದೊಂದು ಸೀರೀಸಿಗೂ ಬೇರೆ ಬೇರೆ ಬಡ್ಡಿ ದರ ಆಗುತ್ತದೆ. ಸಾಧಾರಣವಾಗಿ ಸೇಕಡ 9ರಷ್ಟು ಇಂಟರೆಸ್ಟ್ ಆಗುತ್ತದೆ.

ಶ್ರೀ ಎಸ್. ಪೈ. ಪಾಟೀಲ್.—ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಿಂದ ಬಡ ರೈತರು ಸಾಲ ಪಡೆಯಬೇಕಾದರೆ ಅರ್ಜಿ ಹಾಕಿದ ಏಳೆಂಟು ತಿಂಗಳುಗಳಾದರೂ ಸಾಲ ಸಿಗುತ್ತಾ ಇಲ್ಲ. ಈ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದು ಮೇಲೆ ಆ ರೀತಿ ಬಂದಿದ್ದರೂ ಸಹ ಅಂತಹ ಅರ್ಜಿಗಳನ್ನು ಚುರುಕಾಗಿ ವಿಲೇವಾರಿ ಮಾಡುವ ನಲುವಾಗಿ ಏನಾದರೂ ನೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಜನರಲ್ಲಾಗಿ ಸೂಪರ್‌ವಿಷನ್ ಮಾಡುತ್ತೇವೆ. ಎಲ್ಲಿ ಸರಿಯಾಗಿ ಕೆಲಸ ಮಾಡುವುದಿಲ್ಲ; ಬೇಕೆಂತಲೇ ನಿಧಾನ ಮಾಡುತ್ತಾರೋ ಅಂಥಾದ್ದನ್ನು ಮಾತ್ರ ಸರ್ಕಾರ ಗಮನಿಸುತ್ತದೆ.

ಶ್ರೀ ಟಿ. ವಿ. ಕೃಷ್ಣಪ್ಪ.—ನುಸ್ತಿ ಬಡ್ಡಿ ದರ ಬಹಳ ಹೆಚ್ಚಾಗಿರುವುದರಿಂದ ರೈತರು ಸಾಲ ಮಾಡಿದ್ದನ್ನು ತೀರಿಸುವುದಕ್ಕಾಗದೆ ಪದೇಪದೇ ಸಾಲಗಳನ್ನು ಮಾಡುತ್ತಲೇ ಇರುತ್ತಾರೆ. ಆದುದರಿಂದ ರಾಜ್ಯದ ಯಾವ ಯಾವ ಭಾಗದಲ್ಲಿ ಒಂದುವರ್ಷಕ್ಕಿಂತ ಹೆಚ್ಚು ಕಾಲ ಕ್ಷಾಮಕ್ಕೆ ತುತ್ತಾಗಿರುತ್ತವೆ ಅಂಥ ಪ್ರದೇಶದಲ್ಲಿರತಕ್ಕ ರೈತರಿಗೆ ಈ ಬಡ್ಡಿಯನ್ನು ಪೂರ್ತಿಯಾಗಿ ಮನ್ನ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಶಂಕರ ಆಳ್ವ.—ಬೇಕಾದರೆ ಮೀಡಿಯಂ ಟರ್ಮ್ ಲೋನನ್ನು ಲಾಂಗ್ ಟರ್ಮಿಗೆ ಕನ್‌ವರ್ಟ್ ಮಾಡಬಹುದು.

ಶ್ರೀ ಜೆ. ಎಲ್. ಕಬಾಡಿ.—ರಿಸರ್ವ್ ಬ್ಯಾಂಕಿನವರು ಸ್ಟೇಟ್ ಡೆವಲಪ್‌ಮೆಂಟ್ ಬ್ಯಾಂಕುಗಳಿಗೆ ಶೇಕಡ 7 ರಂತೆ ಕೊಡತಕ್ಕ ಹಣವನ್ನು ಪಿ. ಎಲ್. ಡಿ. ಬ್ಯಾಂಕಿನವರು ಶೇಕಡ ಎಂಟೂಕಾಲರಂತೆ ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ.—ಅವರು ಡಿಪೆಂಚರನ್ನು ಫ್ಲೋಟ್ ಮಾಡುತ್ತಾರೆ.

Sri H. S. SIDDAPPA.—My question is specific. He has not answered my question.

Sri A. SHANKARA ALVA.—I want notice.

ಶ್ರೀ ಬಾಪೂಗೌಡ ರಾಯಪ್ಪ.—ರಿಜರ್ವ್ ಬ್ಯಾಂಕಿನವರು ನಾಲ್ಕು ಅಥವಾ ನಾಲ್ಕೂವರೆ ಪರ್ಸೆಂಟಿಗೆ ಕೊಡತಕ್ಕ ಸಾಲ ರೈತನಿಗೆ ಈ ಪ್ರೈಮರಿ ಕೋಅಪರೇಟೀವ್ ಸೊಸೈಟಿಗಳ ಮೂಲಕ ಮುಟ್ಟಬೇಕಾಗಿದ್ದರೆ ಆ ಬಡ್ಡಿ ದರ 10 ಪರ್ಸೆಂಟಿಗೆ ಮುಟ್ಟುವುದರಿಂದ ಈ ಸಾಲವನ್ನು ರೈತರಿಗೆ ನೇರವಾಗಿ ಆ ಏಪೆಕ್ಸ್ ಬ್ಯಾಂಕುಗಳು ಮುಟ್ಟುವಂತೆ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಶಂಕರ ಆಳ್ವ.—ಹಾಗೆ ಕೊಡುವುದಕ್ಕೆ ಕಷ್ಟವಾಗುತ್ತದೆ. ಎಲ್ಲ ರೈತರಿಗೂ ಸಾಲ ಸಿಕ್ಕುವುದು ಅದರಿಂದ ಕಷ್ಟವಾಗುತ್ತದೆ.

ಶ್ರೀ ಆಂಜನೇಯ.—ಈ ಸುಸ್ತಿ ಬಡ್ಡಿ ದುಬಾರಿಯಾದ್ದರಿಂದ ಅನೇಕರು ತಮ್ಮ ಮನೆಮಠಗಳನ್ನು ಹರಾಜುಮಾಡಿಕೊಂಡಿದ್ದಾರೆಂದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಶಂಕರ ಆಳ್ವ.—ಸಕಾಲಕ್ಕೆ ರಿಜರ್ವ್ ಬ್ಯಾಂಕಿಗೆ ಡಿ.ಸಿ.ಸಿ. ಬ್ಯಾಂಕಿನವರು ಮತ್ತು ಏಪೆಕ್ಸ್ ಬ್ಯಾಂಕಿನವರು ಹಣವನ್ನು ರಿಟರ್ನ್ ಮಾಡದಿದ್ದರೆ ಅವರೂ ಕೂಡ ಪೀನಲ್ ಇಂಟ್ರೆಸ್ಟ್ ಕೊಡಬೇಕು.

Crimes Registered in Arsikere Circle Police Station

362. Sri H. S. SIDDAPPA (Arasikere).—

Will the Chief Minister be pleased to state :—

(*a*) the number of crimes registered in each Police Station in Hassan District (yearwar from 1970 to 1972) ;

(*b*) the number of crimes registered in Arsikere Circle Police Station (This may be given yearwar from 1970, 1971 and 1972) ;

(*c*) the number of cases ended with Conviction and the number of cases acquitted ?

Sri H. M. CHANNABASAPPA (Minister for Public Works and Electricity) [On behalf of Sri D. Devaraj Urs (Chief Minister)].—

(*a*)—		*1970*	*1971*	*1972*
1 Hassan Town	...	716	619	643
2 Hassan Rural	...	307	424	550
3 Dudda	...	330	244	245
4 Alur	...	227	190	231
5 Arsikere Town	...	224	451	530
6 Arasikere Rural	...	413	472	468
7 Banavar	...	269	219	339
8 Nuggebally	...	153	185	218
9 Sakaleshpur	...	374	331	458
10 Belur	...	211	215	517
11 Yeslur	...	101	86	126
12 Arehally	...	104	126	95
13 Holenarasipur	...	491	487	551
14 Arakalgud	...	454	299	321
15 Channarayapatna	...	660	530	691
16 Konanur	...	277	261	240
Total	...	5,311	5,129	5,923